**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.117/2022**

| | | |
|---|---|---|
| ಸಾಕ್ಷಿದಾರರ ಹೆಸರು | : ವಿನಿಲ್ | ಫ್ರಾಸಾ-6 |
| ತಂದೆಯ ಹೆಸರು | : ರಮಾನಂದ | ಚಾಸಾ-6 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 22.12.2025 |
| ವಾಸಸ್ಥಳ | : ಪುತ್ತೂರು | |

**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿರುವ 1 ನೇ ಆರೋಪಿಯ ಪರಿಚಯ ನನಗಿಲ್ಲ. ನಾನು ಅವರನ್ನು ಈ ಹಿಂದೆ ಎಲ್ಲೂ ನೋಡಿಲ್ಲ. ಚಾಸಾ-2, 4 ಮತ್ತು 5 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-23 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-24 ಮತ್ತು 25 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-23(ಸಿ) ಎಂದು ಗುರುತಿಸಲಾಯಿತು.

3 ವರ್ಷದ ಹಿಂದೆ ನಾನು ಮೂಡಿಗೆರೆಗೆ ಬಂದಿದ್ದಾಗ ಮೂಡಿಗೆರೆ ಪೋಲಿಸರು ನನ್ನ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನನ್ನ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ಆರೋಪಿತರನ್ನು ಮತ್ತು ಯಾವುದೇ ವಸ್ತುವನ್ನು ನೋಡಿಲ್ಲ. ನಿಪಿ-25 ರಲ್ಲಿ ಕಾಣುವ ವಸ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಿಪಿ-23 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.14.01.2022 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-37 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**
**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.117/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರತಾಪ್ | ಫ್ರಾಸಾ-5 |
| ತಂದೆಯ ಹೆಸರು | : ಧರಣಪ್ಪ | ಚಾಸಾ-5 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮೆಕ್ಯಾನಿಕ್ | ದಿನಾಂಕಃ 22.12.2025 |
| ವಾಸಸ್ಥಳ | : ದಾರದಹಳ್ಳಿ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿರುವ 1 ನೇ ಆರೋಪಿಯ ಪರಿಚಯ ನನಗಿಲ್ಲ. ನಾನು ಅವರನ್ನು ಈ ಹಿಂದೆ ಎಲ್ಲೂ ನೋಡಿಲ್ಲ. ಚಾಸಾ-2 ಮತ್ತು 4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-23 ಮತ್ತು ನಿಪಿ-26 ರ ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ನಿಪಿ-25, 27 ಮತ್ತು 28 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-23(ಬಿ) ಮತ್ತು 26(ಬಿ) ಎಂದು ಗುರುತಿಸಲಾಯಿತು.

3 ವರ್ಷದ ಹಿಂದೆ ನಾನು, ಚಾಸಾ-2 ಮತ್ತು ಚಾಸಾ-4 ರವರು ಮೂಡಿಗೆರೆಯಲ್ಲಿ ಕೆಲಸ ಮುಗಿಸಿಕೊಂಡು ಬರುವಾಗ ಪೋಲಿಸರು ನಮ್ಮ ಸಹಿಗಳನ್ನು ಪಡೆದು, ಫೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನಮ್ಮ ಸಹಿಯನ್ನು ಪಡೆದು ಫೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡುವ ಕಾಲಕ್ಕೆ ಆರೋಪಿತರನ್ನು ಮತ್ತು ಯಾವುದೇ ವಸ್ತುವನ್ನು ನೋಡಿಲ್ಲ. ಮೇಲೆ ಗುರುತಿಸಿರುವ ಮಹಜರ್ ಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ಸಾಕ್ಷಿಗೆ ನಿಪಿ-23 ಮತ್ತು 26 ರಲ್ಲಿನ ಮಹಜರ್ ಗಳಲ್ಲಿನ ಸಂಪೂರ್ಣ ವಿಚಾರಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:  ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.117/2022

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರವೀಣ್ | ಫ್ರಾಸಾ-4 |
| ತಂದೆಯ ಹೆಸರು | : ದಯಾನಂದ್ | ಚಾಸಾ-4 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮೆಕ್ಯಾನಿಕ್ | ದಿನಾಂಕಃ 22.12.2025 |
| ವಾಸಸ್ಥಳ | : ಆಲ್ದೂರು | |

### :ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:

ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿರುವ 1 ನೇ ಆರೋಪಿಯ ಪರಿಚಯ ನನಗಿಲ್ಲ. ನಾನು ಅವರನ್ನು ಈ ಹಿಂದೆ ಎಲ್ಲೂ ನೋಡಿಲ್ಲ. ಚಾಸಾ-2 ಮತ್ತು 5 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.13.01.2022 ರ ಎರಡು ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಸದರಿ ಮಹಜರ್ ಗಳಿಗೆ ಅಡಕಗೊಂಡ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಮುಂದುವರೆದು ದಿ.14.01.2022 ರ ಎರಡು ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಸದರಿ ಮಹಜರ್ ಗಳಿಗೆ ಅಡಕಗೊಂಡ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ಮತ್ತು ಫೋಟೋಗಳನ್ನು ಕ್ರಮವಾಗಿ ನಿಪಿ-23 ರಿಂದ 36, ಸಾಕ್ಷಿಯ ಸಹಿಗಳನ್ನು ನಿಪಿ-23(ಎ), 26(ಎ), 29(ಎ) ಮತ್ತು 34(ಎ) ಎಂದು ಗುರುತಿಸಲಾಯಿತು.

3 ವರ್ಷದ ಹಿಂದೆ ನಾನು, ಚಾಸಾ-2 ಮತ್ತು ಚಾಸಾ-5 ರವರು ಮೂಡಿಗೆರೆಯಲ್ಲಿ ಕೆಲಸ ಮುಗಿಸಿಕೊಂಡು ಬರುವಾಗ ಪೋಲಿಸರು ನಮ್ಮ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನಮ್ಮ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡುವ ಕಾಲಕ್ಕೆ ಆರೋಪಿತರನ್ನು ಮತ್ತು ಯಾವುದೇ ವಸ್ತುವನ್ನು ನೋಡಿಲ್ಲ. ಮೇಲೆ ಗುರುತಿಸಿರುವ ಮಹಜರ್ ಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

### ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:

ಸಾಕ್ಷಿಗೆ ನಿಪಿ-23, 26, 29 ಮತ್ತು 34 ರಲ್ಲಿನ ಮಹಜರ್ ಗಳಲ್ಲಿನ ಸಂಪೂರ್ಣ ವಿಚಾರಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.